## ಭುವನೇಶ್ವರಿ ಉತ್ಸವ ಸಂಘದವರಿಂದ ಮಹಿಳಾ ದಿನಾಚರಣೆ

# ಸಮಾಜದಲ್ಲಿ ಮಹಿಳೆಗೆ ಅತ್ಯುನ್ನತ ಸ್ಥಾನವಿದೆ: ವಿದ್ಯಾವತಿ ಭಜಂತ್ರಿ



ಬೆಳಗಾವಿ 19:– ಕೆಟ್ಟ ಮಕ್ಕಳು ಹುಟ್ಟಬಹುದು ಆದರೆ ಕೆಟ್ಟ ತಾಯಿ ಹುಟ್ಟಲು ಸಾಧವಿಲ್ಲ. ಸಮಾಜ ಮಹಿಳೆಯರನ್ನು ಗೌರವಿಸುತ್ತ ಅತ್ಯುನ್ನತ ಸ್ಥಾನವನ್ನು ನೀಡಿದೆ. ಶ್ರೀ ಭುವನೇಶ್ವರಿ ಉತ್ಸವ ಸಂಘದವರು ಸಮಾಜಮುಖಿ ಕೆಲಸಗಳನ್ನು ಮಾಡುತ್ತ ಬಂದಿದ್ದಾರೆ. ಈ ದೇಹ ನಶಿಸಿಹೋಗಬಹುದು ಮಾಡಿದ ಒಳ್ಳೆಯ ಕಾರ್ಯ ಶಾಸ್ವತ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ವಿದ್ಯಾವತಿ ಭಜಂತ್ರಿಯವರು ಇಂದಿಲ್ಲಿ ಹೇಳಿದರು.

ನಗರದ ಶ್ರೀ ಭುವನೇಶ್ವರಿ ಉತ್ಸವ ಸಂಘದವರು ಇದೇ ದಿ. 17 ರವಿವಾರದಂದು ಮ. 3 ಗಂಟೆಗೆ ಹಿಂದವಾಡಿ ವಿದ್ಯಾಪೀಠ ಹತ್ತಿರವಿರುವ ಐ.ಎಂ.ಇ.ಆರ್ ಸಭಾಭವನದಲ್ಲಿ 'ಮಹಿಳಾ ದಿನಾಚರಣೆ'ಯನ್ನು ಹಮ್ಮಿಕೊಂಡಿದ್ದರು. ಕಾರ್ಯಕ್ರವನ್ನು ಉದ್ಘಾಟಿಸಿದ ಶ್ರೀಮತಿ ವಿದ್ಯಾವತಿಯವರು ಮೇಲಿನಂತೆ ಅಭಿಪ್ರಾಯ ಪಟ್ಟರು.

ಖ್ಯಾತ ಸಾಹಿತಿಗಳಾದ ಡಾ. ಗುರುದೇವಿ ಹುಲೆಪ್ಪನ 'ವಮಠ "ವೃದ್ಧರ ಅಂತಿಮ ಕಾಲ ಸುಖಕರವಾಗಿವೆ ಯೇ?" ವಿಷಯ ಕುರಿತು ಮಾತನಾಡುತ್ತ ವೃದ್ಯಾಪ್ಯವು ಜೀವನದ ಒಂದು ಅವಿಭಾಜ್ಯ ಅಂಗವಾಗಿದ್ದು ಈ ಸಂದರ್ಭದಲ್ಲಿ ಬರುವ ಸಂಕಟ, ನೋವುಗಳನ್ನು ಸ್ಪರ್ಧಾಬಾವದಿಂದ ಸ್ವೀಕರಿಸಬೇಕು. ಯೋಗ, ವ್ಯಾಯಾಮ, ಪ್ರಾರ್ಥನೆ, ಆಧ್ಯಾತ್ಮಿಕದತ್ತ ಹೆಚ್ಚಿನ ಒಲವು ತೋರಿಸುವದರ ಮೂಲಕ ಜೀವನ ಸಂಧ್ಯಾ ಜೀವನವನ್ನು ಸರಳಿಕರಿಸಿಕ್ಕೊಳ್ಳಬಹುದು ಎಂದು ಹೇಳಿದರು.

ಶ್ರೇಷ್ಠ ವಾಗ್ಮಿ ಡಾ. ಮೈತ್ರಾಯಿಣಿ ಗದಿಗೆಪ್ಪಗೌಡರ 'ಸ್ತ್ರೀ ಸ್ವಾಂತಂತ್ರ್ಯ', ಶ್ರೀಮತಿ ಬನಾ ಕೌಜಲಗಿ 'ಹೆಚ್ಚುತ್ತಿರುವ ವಿವಾದ ವಿಚ್ಛೇದನಗಳು ಮತ್ತು ಮಹಿಳಾ ಕಾನೂನು ದುರ್ಬಳಿಕೆ' ವಿಷಗಳ ಕುರಿತಂತೆ ಮಾತನಾಡಿದರು. ಪಾರಂಪರಿಕ ಕೌದಿ ಹಾಗೂ ಕಸೂತಿ ಕಲಾವಿದೆ ಶ್ರೀಮತಿ ಶಾರವ್ವಾ ಶಿವಪುತ್ರ ದಾರೋಜಿ ಅವರನ್ನು ಸನ್ಮಾನ ಸಲಾಯಿತು. ವಿವಿಧ ಮಹಿಳಾ ಮಂಡಳದ ಕಲಾವಿ ದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ವೇಷಭೂಷಣ ಕಲಾಪ್ರಸ್ತುತಿಗಳು ಜರುಗಿದವು.

ಶಾಂತಾ ಹೆಗಡೆ, ಶೈಲಜಾ ಭಿಂಗೆ, ಜಯಶೀಲಾ ಬ್ಯಾಕೋಡ, ಆಶಾ ಕಡಪಟ್ಟಿ ಮತ್ತು ಭುವನೇಶ್ವರಿ ಉತ್ಸವ ಸಂಘದ ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದರು.ಶ್ರೀಮತಿ ದೀಪಾ ಪದಕಿ ಪ್ರಾರ್ಥಿ ಸಿದರು. ಶ್ರೀಮತಿ ಲೀಲಾ ಚೌಗಲೆ ಸ್ವಾಗತಿಸಿದರು. ಮಧು ಮುತಾ ಲಿಕದೇಸಾಯಿ ಪರಿಚಯಿಸಿದರು. ಡಾ. ಭಾರತಿ ಮಠದ ನರೂಪಿಸಿ ದರು. ಶೀಲಾ ಗುಡಸ ವಂದಿಸಿದರು.

# ಹಿಡಕಲ್ ಡ್ಯಾಮಿನ ಚರ್ಚಿನಲ್ಲಿ ಪಾರ್ಥನಾ ಕೂಟ




ಯಮಕನಮರಡಿ 19 : ಸಮೀಪದ ಹಿಡಕಲ್ ಡ್ಯಾಮದ ಸೆಂಟ್ ಮಿಖಾಯೇಲರ ಚರ್ಚಿನಲ್ಲಿ ರವಿವಾರ ದಿ. 17 ರಂದು ಗುಡ್ ಪ್ರೈಡೆ ಪ್ರಯುಕ್ತ ಒಂದು ದಿನದ ಪ್ರಾರ್ಥನಾ ಕೂಟವನ್ನು ಫಾದರ ಲೂರ್ದುಸ್ವಾಮಿ ನೇತ್ರತ್ವದಲ್ಲಿ ಆಯೋಜಿಸಲಾಗಿತ್ತು. ಹಿಡಕಲ್ ಡ್ಯಾಮ, ಗೋಕಾಕ ಫಾಲ್ಸ್, ಸಂಕೇಶ್ವರ, ಗೊಡಚಿನಮಲ್ಕಿ, ಹಾಗೂ ಪಾಶ್ಚಪೂರ ಊರುಗಳಿಂದ ಭಕ್ತಾಧಿಗಳು ಆಗಮಿಸಿ ಗುಡ್ ಪ್ರೈಡೆ ಹಾಗೂ ಯೇಸುವಿನ ಪುನರುತ್ಥಾನದ ಹಬ್ಬಕ್ಕೆ ಆಧ್ಯಾತ್ಮಿಕ ಸಿದ್ದತೆಯನ್ನು ಮಾಡಿಕೊಂಡರು ಪ್ರಾರ್ಥನಾ ಕೂಟವನ್ನು ನಡೆಸಿಕೊಡಲು ಹಾಸನದಿಂದ ವಂದನೀಯ ಗುರುಗಳಾದ ಪಾಧರ ಡೇವಿಡ್, ಪಾಧರ, ಜಾನ, ವಿಜಯಕುಮಾರ ಆಗಮಿಸಿದರು.

ಪ್ರೀತಿ ಸೇವೆ ತ್ಯಾಗ ಕ್ಷಮೆ, ದೈವಭಕ್ತಿ ಮಹತ್ವದ ಬಗ್ಗೆ ಭೋಧನೆ ಮಾಡಿದರು. ಸಾಯಂಕಾಲ ಬಲಿಪೂಜೆಯನ್ನು ಅರ್ಪಿಸಿ ಮೇನನೊ ಗೋನ್ಸಾಲಿವಿಸ್ ಸಂತ ಸ್ಥಾನಿಕ ಆರೂಡಪ್ಪ ವಿರಕ್ತಮಠದ ದೇಶನೂರ ಇವರು ಆಗಮಿಸಿ ಎಲ್ಲ ಭಕ್ತರಿಗಾಗಿ ಪ್ರಾರ್ಥಿಸಿದರು. ಸೆಂಟ್ ತೆರೆಸಾ ಶಾಲೆಯ ಎಲ್ಲ ಸಿಸ್ಟರಗಳು ಸಹ ಪ್ರಾರ್ಥನಾ ಕೂಟದಲ್ಲಿ ಭಾಗವಹಿಸಿದರು. ಎಲ್ಲ ಭಕ್ತರು ಹಾಗೂ ಗುರುಗಳು ದೇಶದಲ್ಲಿ ಶಾಂತಿ ನೆಮ್ಮದಿ ನೆಲಸಿ ಎಲ್ಲ ಜನರು ಜಾತಿ ಭೇದ ಭಾವ ಮರೆತು ಒಟ್ಟಾಗಿ ಬಾಳುವ ವಾತಾವರಣ ನಿರ್ಮಾಣವಾಗಲೆಂದು ಪ್ರಾರ್ಥಿಸಿದರು.

# ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ: ಡಾ. ಸಚಿನ್ ಸಬನಿಸ



ಬೆಳಗಾವಿ: ಮಹಿಳೆಯರು ಎಲ್ಲಕ್ಷೇತ್ರದಲ್ಲಿ ಕಾರ್ಯನಿರ್ವಸುತ್ತಿದ್ದು, ದೇಶಕ್ಕೆತಮ್ಮದೇ ಆದ ಕೊಡುಗೆ ನೀಡಿದ್ದಾರೆ. ದೇಶದಅಭಿವೃದ್ಧಿಯಲ್ಲಿ ಮಹತ್ವದ ಕೊಡುಗೆ ನೀಡುವುದರೊಂದಿಗೆ ಸಂಸಾರದ ಶಕ್ತಿಯಾಗಿ ನಿಂತಿದ್ದಾರೆಎಂದುಡಾ. ಸಚಿನ್ ಸಬನಿಸ ಹೇಳಿದರು.

ಇಲ್ಲಿನ ಖಾಸಗಿ ಹೋಟೆಲ್ ನಲ್ಲಿ ಲಘು ಉದ್ಯೋಗ ಭಾರತಿ, ಸ್ವಾವಲಂಬಿ ಭಾರತಅಭಿಯಾನ ಹಾಗೂ TJSP ಬ್ಯಾಂಕ್ ಸಹಯೋಗದಲ್ಲಿ ಆಯೋಜಿಸಲಾದ ಮಹಿಳಾ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇತಿಹಾಸ ಉದ್ದಕ್ಕೂ ಮಹಿಳೆಯರು ಪಾತ್ರ ಅಪಾರವಾಗಿದೆ. ಮಹಿಳೆಯರು ತರಬೇತಿ ಪಡೆಯುವ ಮೂಲಕ ಸ್ವಉದ್ಯೋಗಕೈಗೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ. ಸಂಸಾರದಕ್ಷ–ಸುಖಃದಲ್ಲಿ ಭಾಗಿಯಾಗಿ ಮನೆಯವರ ಏಳಿಗೆಗೆ ಶ್ರಮಿಸುವವಳು ಎಂದರು.ಶಾರದಾ ಶಿವಪುತ್ರಪ್ಪ ಮಾತನಾಡಿ, ಶಿಕ್ಷಣ, ಉದ್ಯೋಗ ವಿವಿಧಕ್ಷೇತ್ರದಲ್ಲಿ ಮಹಿಳೆಯರು ಕಾರ್ಯನಿರ್ವಸುತ್ತಿದ್ದಾರೆ. ಇತ್ತೀಚೆಗೆದೇಶದ ಸೈನಿಕ ವೃತ್ತಿಯಲ್ಲಿ ಹೆಣ್ಣು ಮಕ್ಕಳು ಸೇರ್ಪಡೆಯಾಗುತ್ತಿರುವುದು ಹೆಮ್ಮೆಯ ಸಂಗತಿಎಂದು ಹೇಳಿದರು.

ಬಡತನದಲ್ಲಿದ್ದವೆಎಂದು ಮಹಿಳೆಯರು ಕುಗ್ಗಬಾರದು ಆ ಬಡತನವನ್ನು ಮೆಟ್ಟಿ ನಿಲ್ಲಬೇಕಿದೆ. ಹತ್ತಾರೂಜನರಿಗೆಉದ್ಯೋಗ ನೀಡುವ ಶಕ್ತಿಯಾಗಿ ನಿಲ್ಲಬೇಕುಎಂದರು. ಈ ಸಂದರ್ಭದಲ್ಲಿ ಟಿಎಟಕ ಬ್ಯಾಂಕ್ ನ ಸಹ ವ್ಯವಸ್ಥಾಪಕರಾದ ಸುಜಾತಾ ಅವರು ತಮ್ಮ ಬ್ಯಾಂಕ್ ಬಗ್ಗೆ ಮಾಹಿತಿಯನ್ನು ನೀಡಿದರು, ಹಾಗೂ ಟಃಎ ಸ್ತ್ರೀಯರಿಗೆ ಸನ್ಮಾನಕಾರ್ಯಕ್ರಮವನ್ನು ಮಾಡಿದರು, ಸ್ವಾವಲಂಬಿಯ ಪ್ರಾಂತ ಸಹ ಸಮನ್ವಯಕರು ಮತ್ತು ಲಘು ಉದ್ಯೋಗ ಭಾರತೀಯರಾಜ್ಯ ಕಾರ್ಯದರ್ಶಿಗಳಾದ ಪ್ರಿಯಾ ಪುರಾನಿಕ್ಅವರು ಸ್ವಾಗತಿಸಿದರು , ಲತಾಅವರು ನಿರೂಪಿಸಿದರು, ಲಘು ಉದ್ಯೋಗ ಭಾರತದ ಬೆಳಗಾವಿಯ ಜಿಲ್ಲಾ ಸಂಯೋಜಕರಾದ ನಳಿನ ವೆಮೋಲ್ಕರ್ ವಂದಿಸಿದರು. ಹಾಗೂ ಇತರರುಇದ್ದರು.

# ಸಂಸದ ಅನಂತಕುಮಾರ ಹೆಗಡೆ ಗಡಿಪಾರಿಗೆ ಆಗ್ರಹ

ಕುಕನೂರು: ಸಂಸದ ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯಿಂದ ಗ್ರೇಡ್–2 ತಹಶೀಲ್ದಾರ್ ಮುರುಳಿಧರ್ ಕುಲಕರ್ಣಿ ಅವರಿಗೆ ವಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಆಗಮಿಸಿದ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯ ಕಲಬುರ್ಗಿ ವಿಭಾಗೀಯ ಉಪಾಧ್ಯಕ್ಷ ಬಸವರಾಜ ನಡುವಲಮನಿ ಮಾತನಾಡಿ, ರಾಜ್ಯದ ಬಿಜೆಪಿ ಪಕ್ಷದ ಸಂಸದ ಅನಂತಕುಮಾರ ಹೆಗಡೆ ಅವರು ಪದೆ ಪದೇ ಸಂವಿಧಾನವನ್ನು ನಾವು ಬದಲಾಯಿಸುತ್ತೇವೆ ಎಂದು ಹೇಳಿಕೆ ನೀಡುತ್ತಾ ಬಂದಿದ್ದಾರೆ. ಆದರೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರವಾಗಲಿ ಅವರ ವಿರುದ್ಧ ಏನು ಕ್ರಮ ಕೈಗೊಂಡಿಲ್ಲ ಮತ್ತೆ ಸಂವಿಧಾನ ಕುರಿತು ತಮ್ಮ ಹೇಳಿಕೆಯನ್ನು ಪುರ್ನರುಚ್ಚರಿಸಿದ್ದಾರೆ. ಸಂವಿಧಾನ ವಿರೋಧ ಹೇಳಿಕೆಯಾಗಿದ್ದು ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು. ಕಾನೂನಿನ ಅಡಿಯಲ್ಲಿ ಕಠೋರವಾದ ಶಿಕ್ಷೆಯನ್ನು ಕೊಡಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಸವರಾಜ ನಡುವಲಮನಿ, ಶಿವಪ್ಪ ಭಂಡಾರಿ, ವೆಂಕಟೇಶ ಬಳ್ಳಾರಿ, ರವಿ ಹಿರೇಮನಿ, ಶರಣಪ್ಪ ಹಿರೇಮನಿ, ಹನಮಂತಪ್ಪ ಕಡೇಮನಿ, ಅಂದಪ್ಪ ಭಂಡಾರಿ, ಲೋಹಿತ್ ಹಿರೇಮನಿ ಸೇರಿದಂತೆ ಇತರರು ಇದ್ದರು.

ಕುಕನೂರು ಪಟ್ಟಣದಲ್ಲಿ ಸಂಸದ ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯಿಂದ ಗ್ರೇಡ್–2 ತಹಶೀಲ್ದಾರ್ ಮುರುಳಿಧರ್ ಕುಲಕರ್ಣಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.



# ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ




ಬೈಲಹೊಂಗಲ : ಅಧ್ಯಕ್ಷರು, ತಾಲೂಕಾ ಸ್ವೀಪ್ ಸಮೀತಿ ಬೈಲಹೊಂಗಲ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಬೈಲಹೊಂಗಲ ರವರ ಅಧ್ಯಕ್ಷತೆಯಲ್ಲಿ ಇಂದು ಸ್ವೀಪ್ ಚಟುವಟಿಕೆಯ ಮೂಲಕ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತ ಹಾಗೂ ಗ್ರಾಮಮಗಳಲ್ಲಿ ಮತ್ತು ಪಟ್ಟಣ ಪಂಚಾಯತಿಯ ಮತಗಟ್ಟೆಗಳಲ್ಲಿ ಲೋಕಸಭಾ ಚುನಾವಣೆ–2024 ರಲ್ಲಿ ಪ್ರತಿಯೊಬ್ಬರು ಮತದಾನದಿಂದ ವಂಚಿತರಾಗಬಾರದು ಚುನಾವಣಾ ಪರ್ವ ದೇಶದ ಗರ್ವ ಎಂಬಂತೆ ಕಡ್ಡಾಯವಾಗಿ ಎಲ್ಲರೂ ದೇಶದ ಭದ್ರತೆಗಾಗಿ ಗರ್ವದಿಂದ ಮತದಾನ ಮಾಡಬೇಕು ಎಂದು ತಿಳಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸ್ವೀಪ್ ಸಮೀತಿಯ ಅಧ್ಯಕ್ಷರು ಗಂಗಾಧರ ಕಂದಕೂರವರು ಮಾತನಾಡಿ ಬೈಲಹೊಂಗಲ ಮತಕ್ಷೇತ್ರ–16 ರರಲ್ಲಿರುವ ಪ್ರತಿಯೊಬ್ಬ ಮತದಾರರು ಬರುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತವನ್ನು ಚಲಾವಣೆ ಮಾಡುವ ಮೂಲಕ ಚುನಾವಣಾ ಪರ್ವ ದೇಶದ ಗರ್ವ ಎಂಬುವುದನ್ನು ಹೆಮ್ಮೆಯಿಂದ ಮತದಾನ ಮಾಡಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಯುವ ಮತದಾರರು ಹೆಚ್ಚಿನ ಪ್ರಮಾಣದಲ್ಲಿ ಈ ಚುನಾವಣಾ ಪರ್ವದಲ್ಲಿ ಪಾಲ್ಗೊಳ್ಳಿ ಹಾಗೂ ಹಿರಿಯ ನಾಗರಿಕರು, ಶತಾಯುಷಿಗಳು ವಿಶೇಷ ಚೇತನರು, ಮಹಿಳೆಯರು ತೃತೀಯ ಲಿಂಗಿಗಳು ಹಾಗೂ ಜನಸಾಮಾನ್ಯರು ಈ ಮತದಾನದಲ್ಲಿ ಕಡ್ಡಾಯವಾಗಿ ಪಾಲ್ಗೊಂಡು ತಮ್ಮ ತಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಂತೆ ಕರೆ ನೀಡಿದರು.

ಸದರಿ ಕಾರ್ಯಕ್ರಮದಲ್ಲಿ ಉಪಸ್ಥೀತಿ, ವಿಜಯ ಪಾಟೀಲ ಸಹಾಯಕ ನಿರ್ದೇಶಕ (ಗ್ರಾ.ಉ) ರಘು ಬಿ ಎನ್ ಸಹಾಯಕ ನಿರ್ದೇಶಕ (ಪಂ ರಾಜ್) ರಾಜಶೇಖರ ಕಡೆಮನಿ, ತಾಪಂ ಯೋಜನಾಧಿಕಾರಿ ಹಾಗೂ ತಾಲೂಕು ಪಂಚಾಯತ ಎಲ್ಲಾ ಸಿಬ್ಬಂದಿ ವರ್ಗ ಮತ್ತು ತಾಲೂಕಿನ ಎಲ್ಲಾ ಗ್ರಂಥಾಲಯದ ಗ್ರಂಥ ಸಹಾಯಕರು ಹಾಜರಿದ್ದರು.

ಇದೆ ಸಂಧರ್ಭದಲ್ಲಿ ಮತದಾನ ಜಾಗೃತಿಯ ಪ್ರತಿಜ್ಞಾ ವಿಧಿಯನ್ನು ಭೋಧೀಸಲಾಯಿತು ಎಲ್ಲ ಸಿಬ್ಬಂದಿಗಳು ಭೋದನೆ ಮಾಡಿದರು ಪ್ರತಿಜ್ಞಾ ವಿಧಿಯನ್ನು ಸಂಗನಗೌಡ ಬ ಸಂಗನೌಡರ ಭೋಧಿಸಿದರು.

# ಜೈನ ಸಮಾಜದ ಅಭಿವೃದ್ಧಿಗೆ ಜಿತೊ ಸಂಸ್ಥೆ ಕಟಿಬದ್ಧ: ಲಲಿತ ಗಾಂಧಿ



ಬೆಳಗಾವಿ:ಮಾ;19: ಜೈನ ಇಂಟರ್‌ನ್ಯಾಷನ್‌ಲ ಟ್ರೆಡ ಆರ್ಗನೈಝೇಶನ ಜಿತೋ ಸಂಸ್ಥೆಯು ಜೈನ ಸಮಾಜದ ಸರ್ವಾಂಗೀಣ ಅಭಿವದ್ಧಿಗಾಗಿ ಕಟ್ಟಿಬದ್ದವಾಗಿದ್ದು ಈಗಾಗಲೇ ಸಮಾಜದ ಸಾಕಷ್ಟು ಸಮಸ್ಯೆಗಳನ್ನು ಪರಿಹರಿಸಿ ಸಮಾಜದ ಏಳ್ಗೆಗಾಗಿ ಶ್ರಮಿಸುತ್ತಿದೆ ಎಂದು ಜಿತೊ ಸಂಸ್ಥೆಯ ಅಪೆಕ್ಸ ಸದಸ್ಯ ಹಾಗೂ ಅಖಿಲ ಭಾರತ ಜೈನ ಅಲ್ಪಸಂಖ್ಯಾತರ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಲಲಿತ ಗಾಂಧಿ ಅವರು ಅಭಿಪ್ರಾಯಪಟ್ಟರು.

ರವಿವಾರದಂದು ಬೆಳಗಾವಿಯ ಮಿಲೇನಿಯಂ ಗಾರ್ಡನದಲ್ಲಿ ಜಿತೊ ಸಂಸ್ಥೆಯ 18 ನೇ ಸಂಸ್ಥಾಪನಾ ದಿನಾಚರಣೆಯ ಸಮಾರಂಭ ಹಾಗೂ ಸಮಾಜದ ಸಾಧಕರನ್ನು ಗೌರವಿಸುವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿತೊ ಸಂಸ್ಥೆಯು ಕಳೆದ 18 ವರ್ಷಗಳಲ್ಲಿ ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡಿದೆ. ಸಮಾಜದ ಮಧ್ಯಮ ಮತ್ತು ಬಡ ವರ್ಗದ ಜನರನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವು ,ಶೈಕ್ಷಣಿಕ ನೆರವು, ಯುಪಿಎಸ್‌ಸಿ ಪರೀಕ್ಷೆಯ ಸಿದ್ದತೆಯ ಕಾರ್ಯಾಗಾರಗಳು, ವಸತಿ ನಿಲಯಗಳನ್ನು ನಿರ್ಮಿಸಿ ಸಮಾಜದ ವಿದ್ಯಾರ್ಥಿಗಳಿಗೆ ಉನ್ನತ ಶೀಕ್ಷಣ ನೀಡಲು ನೆರವಾಗುತ್ತ ಬಂದಿದೆ ಎಂದು ಅವರು ತಿಳಿಸಿದರು. ಜೈನ ಸಮಾಜಕ್ಕೆ ರಾಷ್ಟ್ರೀಯ ಅಲ್ಪ ಸಂಖ್ಯಾತರ ಸ್ಥಾನಮಾನ ದೊರಕಿಸಿಕೊಡುವಲ್ಲಿ ಜಿತೊ ಸಂಸ್ಥೆ ಹಾಗೂ ಇನ್ನಿತರ ರಾಷ್ಟ್ರೀಯ ಸಂಸ್ಥೆಗಳು ಸಾಕಷ್ಟು ಶ್ರಮಿಸಿವೆ. ಹಾಗಾಗಿ ಇಂದು ಜೈನ ಸಮಾಜಕ್ಕೆ ಅಲ್ಪ ಸಂಖ್ಯಾತರ ಯೋಜನೆಗಳು ಲಭ್ಯವಾಗಿವೆ. ಈ ಯೋಜನೆಗಳ ಲಾಭವನ್ನು ಸಮಾಜದ ಬಾಂಧವರು ಪಡೆದುಕೊ ಳ್ಳಬೇಕೆಂದು ಅವರು ತಿಳಿಸಿದರು. ಇದೇ ಸಂಧರ್ಭದಲ್ಲಿ ಕೆಕೆಜಿ ವಲಯ ಅಲ್ಪ ಸಂಖ್ಯಾತರ ಸಂಯೋಜಕಿಯಾದ ಕವಿತಾ ಜೈನ ಅವರು ಮಾತನಾಡಿ, ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಜಿತೊ ಸಂಸ್ಥೆಯ ವತಿಯಿಂದ ಅಲ್ಪ ಸಂಖ್ಯಾತರ ಯೋಜನೆಗಳ ಕುರಿತು ಕೈಪಿಡಿಯನ್ನು ಹೊರತರಲಾಗಿದೆ. ಈ ಕೈಪಿಡಿಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಅಲ್ಪ ಸಂಖ್ಯಾತರಿಗೆ ನೀಡಿರುವ ಯೋಜನೆಗಳ ಕುರಿತು ಸಮಗ್ರ ಮಾಹಿತಿ ನೀಡಲಾಗಿದೆ. ಈ ಕೈಪಿಡಿ ಮುಖಾಂತರ ಜೈನ ಸಮಾಜದ ಬಾಂಧವರು ಅಲ್ಪ ಸಂಖ್ಯಾತರ ಯೋಜನೆಗಳನ್ನು ಸದುಪ ಯೋಗ ಪಡೆದುಕೊ ಳ್ಳಬೇ ಕೆಂದು ಅವರು ಕರೆ ನೀಡಿದರು. ಸಮಾರಂಭದಲ್ಲಿ ಜೈನ ಸಮಾಜದಲ್ಲಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ಯುವ ಸಾಧಕ ವಿಭಾಗದಲ್ಲಿ ಅಕ್ಷಯ ಕಟಾರಿಯಾ , ಸಮಾಜ ಸೇವೆ ವಿಭಾಗದಲ್ಲಿ ಪದ್ಮಪ್ರಸಾದ ಹೂಲಿ, ಅತ್ಯುತ್ತಮ ಶಿಕ್ಷಕ ವಿಭಾಗದಲ್ಲಿ ಮಿಥುನ ಶಾಸ್ತ್ರಿ, ಪ್ರಗತಿಪರ ರೈತ ವಿಭಾಗದಲ್ಲಿ ಐನಾಪೂರದ ಪ್ರೇಮನಾಥ ಉಗಾರೆ, ಯಶಸ್ವಿ ಉದ್ಯಮಿ ವಿಭಾಗದಲ್ಲಿ ತವನಪ್ಪ ಪಾಲಕರ, ಸಾಹಿತ್ಯ ಕ್ಷೇತ್ರದಲ್ಲಿ ಡಾ.ಪಿ.ಜಿ .ಕೆಂಪಣ್ಣವರ ಈ ಮಹನೀಯರನ್ನು ಈ ವರ್ಷದ ವಿಶೇಷ ಸಾಧಕರು ಎಂದು ಗುರುತಿಸಿ ಸನ್ಮಾನಿಸಲಾಯಿತು. ಕೆಕೆಜಿ ವಿಭಾ ಗದ ಸಂಯೋಜಕ ಸಂತೋಷ ಪೋರವಾಲ, ಜಿತೊ ಲೇಡಿಜ ವಿಂಗ ಅಧ್ಯಕ್ಷೆ ಮಾಯಾ ಜೈನ, ಯುವ ವಿಭಾಗದ ಅಧ್ಯಕ್ಷ ದೀಪಕ ಸುಬೇದಾರ, ಬೆಳಗಾವಿ ವಿಭಾಗದ ಅಲ್ಪಸಂಖ್ಯಾತರ ವಿಭಾಗದ ಸಂಯೋಜಕ ಸಿದ್ದಾರ್ಥ ಪಾಟೀಲ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು. ಜಿತೊ ಬೆಳಗಾವಿ ವಿಭಾಗದ ಅಧ್ಯಕ್ಷ ವೀರಧವಲ ಉಪಾಧ್ಯೆ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕ ರಾಜೇಶ ಭೋಸಗಿ ಪ್ರಾಸ್ತಾವಿಕವಾಗಿ ಮಾತನಾ ಡಿದರು. ಕಾರ್ಯದರ್ಶಿ ಅಶೋಕ ಕಟಾ ರಿಯಾ ಅತಿಥಿಗಳನ್ನು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

# ನೇಸರಗಿಯಲ್ಲಿ ವಾಹನ ತಪಾಸಣಾ ಕೇಂದ್ರಕ್ಕೆ ಚಾಲನೆ




ನೇಸರಗಿ: ಲೋಕಸಭಾ 2024 ಚುನಾವಣೆಯ ಹಿನ್ನೆಲೆಯಲ್ಲಿ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ಆದೇಶದ ಮೇರೆಗೆ ತಪಾಸಣಾ ಕೇಂದ್ರಗಳನ್ನು ನಿರ್ಮಿಸಲಾಗಿದ್ದು, ವಾಹನಗಳ ತಪಾಸಣೆಯನ್ನು ಕಟ್ಟುನಿಟ್ಟಾಗಿ ಮಾಡಲಾಗುತ್ತದೆ.

ಲೋಕಸಭೆಯ ಚುನಾವಣೆಯ ಹಿನ್ನೆಲೆಯಲ್ಲಿ ನೇಸರಗಿ ಬಾಗಲಕೋಟ ಬೆಳಗಾವಿ ಹೆದ್ದಾರಿಯ ತಪಾಸಣಾ ಕೇಂದ್ರಕ್ಕೆ ಚಾಲನೆ ನೀಡಿದ ನೇಸರಗಿ ಪೋಲಿಸ್ ಠಾಣೆಯ ಸಿಪಿಐ ರಾಘವೇಂದ್ರ ಹವಾಲ್ದಾರ್ ಅವರು, ಚುನಾವಣಾ ಆಯೋಗ ಹಾಗೂ ಜಿಲ್ಲಾ ಚುನಾವಣಾಧಿಕಾರಿಯವರ ಕಟ್ಟುನಿಟ್ಟಿನ ಸೂಚನೆ ಹಿನ್ನೆಲೆಯಲ್ಲಿ ಪ್ರತಿ ಪೋಲಿಸ್ ಠಾಣೆಯ ವ್ಯಾಪ್ತಿಯ ಪ್ರದೇಶದಲ್ಲಿ ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ. ಬಾಗಲಕೋಟ ವಿಜಯಪುರ ಹೈದರಾಬಾದದಿಂದ ಗೋವಾ ಮಹಾರಾಷ್ಟ್ರ ಕಡೆ ಬಂದು ಹೋಗುವ ವಾಹನಗಳನ್ನು ತಪಾಸಣೆಗೊಳಪಡಿಸಿ ಹಾಗೂ ಸಂಶಯಾಸ್ಪದ ವ್ಯಕ್ತಿಗಳನ್ನು ಈ ಕೇಂದ್ರದಲ್ಲಿ ತಪಾಸಣೆಗೆ ಒಳಪಡಿಸಲಾಗುತ್ತದೆ ಎಂದರು.ತಪಾಸಣಾ ಕೇಂದ್ರದಲ್ಲಿ ಪೋಲೀಸರು ಸೇರಿದಂತೆ ಸರಕಾರಿ ಇಲಾಖೆ ಅಧಿಕಾರಿಗಳು ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಹೇಳಿದರು. ಹೊರ ರಾಜ್ಯ ಹಾಗೂ ಜಿಲ್ಲೆಯಿಂದ ಬರುವ ಎಲ್ಲ ವಾಹನಗಳ ತಪಾಸಣೆ ಮಾಡಲಾಗುತ್ತಿದೆ. ದಿನದ 24 ಗಂಟೆಗಳು ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳಲ್ಲಿ 6 ಮಂದಿ ಎಕ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟರ್ ಹಾಗೂ ಸಹಾಯಕರು ದಿನದ 24 ಗಂಟೆಯಂತೆ ಕಾರ್ಯನಿರ್ವಹಿಸಲಿದ್ದಾರೆ. ಎಂದರು.

ಈ ಸಂಧರ್ಭದಲ್ಲಿ ಚೇಕ್ ಪೋಸ್ಟ್ ತನಿಖಾಧಿಕಾರಿ ಗಂಗಪ್ಪ ಮರೇನ್ನವರ, ಪಿಎಸ್‌ಐ ಸಿದ್ದಪ್ಪ ಯಡಹಳ್ಳಿ, ವಿ ಎಸ್ ಡೋಣಿ, ಡಬ್ಲುಪಿಸಿ ಎಸ್ ಐ ಕೆಂಚವ್ವಗೋಳ, ಬಿ ಡಿ ಹಮ್ಮಿಣಿ, ಸುನೀಲ ಸಂಗಮ್ಮನವರ, ಭೀಮರಾವ ಕಡೆಟ್ಟಿ, ಇದ್ದರು

## ಜಿಲ್ಲಾ ಪಂಚಾಯತ: ನರೇಗಾ ಯೋಜನೆಯಡಿ ಹೊರಗುತ್ತಿಗೆಯಲ್ಲಿ ಸಿಬ್ಬಂದಿಗಳ ಪೂರೈಕೆಗಾಗಿ ಏಜನ್ಸಿಗಳಿಂದ ಅರ್ಜಿ ಆಹ್ವಾನ

ಧಾರವಾಡ ಮಾರ್ಚ್: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಗಳ ಆಯ್ಕೆಗೆ ಜಿಲ್ಲಾ ಮಟ್ಟದಲ್ಲಿ ಮಾರ್ಚ 11 ರಂದು ಅರ್ಜಿ ಆಹ್ವಾನಿಸಲಾಗಿದೆ.

ನರೇಗಾ ಯೋಜನೆಯಡಿ ಹೊರಗುತ್ತಿಗೆ ಸಿಬ್ಬಂದಿಗಳ ಪೂರೈಕೆಗಾಗಿ ಮಾನವ ಸಂಪನ್ಮೂಲ ಏಜನ್ಸಿಗಳ ಆಯ್ಕೆಗಾಗಿ ಟೆಂಡರ್ ಅನ್ನು ಕರೆಯಲಾಗಿದೆ. ಆಸಕ್ತ ಸಂಸ್ಥೆಗಳು ತಮ್ಮ ಅರ್ಜಿಗಳನ್ನು ಆನ್ ಲೈನ್ ಮೂಲಕ ಮಾರ್ಚ 23, 2024 ರೊಳಗಾಗಿ ಸಲ್ಲಿಸಬೇಕೆಂದು ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.21 ರಂದು ವಿದ್ಯುತ್ ವ್ಯತ್ಯಯ

ಶಿವಮೊಗ್ಗ, ಮಾರ್ಚ್ : ಆಯನೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಾಲ್ಕನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಮಾ. 21 ರಂದು ಬೆಳಗ್ಗೆ 10.00 ರಿಂದ ಸಂಜೆ 06–00ರವರೆಗೆ ಆಯನೂರು, ಕೋಹಳ್ಳಿ, ಮಂಟಘಟ್ಟ, ಸೂಡೂರು, ಕೂಡಿ, ಮಲೆಶಂಕರ, ದೊಡ್ಡಮತ್ತಲಿ, ತಮ್ಮಡಿಹಳ್ಳಿ, ಚನ್ನಳ್ಳಿ ವೀರಣ್ಣನಬೆನವಳ್ಳಿ, ಮೈಸವಳ್ಳಿ, ಕೊನಗವಳ್ಳಿ, ಸೇವಲಾಲ್‌ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಕರು ಸಹಕರಿಸುವಂತೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.

## ಲಕ್ಷ್ಮೀ ಅಂಗಡಿ ಅವರಿಗೆ ಪಿಎಚ್‌ಡಿ ಪದವಿ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಲಯವು ಲಕ್ಷ್ಮೀ ಅಂಗಡಿ ಅವರು ಸಲ್ಲಿಸಿದ್ದ "ಕನ್ನಡ ಕಾವ್ಯದಲ್ಲಿ ಬಸವಣ್ಣ: ಒಂದು ಅಧ್ಯಯನ" ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಲಕ್ಷ್ಮೀ ಅಂಗಡಿ ಅವರು ಕನ್ನಡ ಅಧ್ಯಯನ ವಿಭಾಗದ ಪ್ರೊ.ವಿಜಯಶ್ರೀ ಸಬರದ(ನಿವೃತ್ತ) ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಲಕ್ಷ್ಮೀ ಅಂಗಡಿ ಅವರನ್ನು ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ಕುಲಸಚಿವ ಪ್ರೊ.ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ. ಚಂದ್ರಶೇಖರ ಅಭಿನಂದಿಸಿದ್ದಾರೆ.

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452. Permission to post at Belagavi, Kacheri post office Belagavi. No:PMG/KA/NK/BM/743/24-26